ಅಡಿಯಲ್ಲಿ ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸುವ ಕೆಲಸವನ್ನು ಮಾಡುತ್ತೇವೆ. ನಿನ್ನೆ ಕೂಡ ನಾನು ಪ್ರಶ್ನೋತ್ತರ ವೇಳೆಯಲ್ಲಿ ಹೇಳಿದ್ದೇನೆ. ಈ ವೈದ್ಯಾಧಿಕಾರಿಗಳ ವಿಷಯದಲ್ಲಿ ನಮ್ಮ ಆಕ್ಟ್ ಏನು ಪಾಸ್ ಆಗಿದೆ, ಆ ಆಕ್ಟ್‌ನ ಅಡಿಯಲ್ಲಿ ರಾಷ್ಟ್ರಪತಿಗಳ ಅಂಕಿತ ಆಗಿ ನಮಗೆ ಬಂದರೆ ಜನವರಿಯಿಂದ ವೈದ್ಯಾಧಿಕಾರಿಗಳ ಕೊರತೆ ಆಗುವುದಿಲ್ಲ. ತಾತ್ಕಾಲಿಕವಾಗಿ ಕಂಟ್ರಾಕ್ಟ್ ಬೇಸಿಸ್ ಮೇಲೆ ವೈದ್ಯಾಧಿಕಾರಿಗಳನ್ನು ನೇಮಕ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅನುಮತಿಯನ್ನು ಕೊಟ್ಟಿರುತ್ತೇವೆ. ಉಳಿದಂಥ ಸಿಬ್ಬಂದಿಯನ್ನು ತಕ್ಷಣದಲ್ಲೇ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಾರಂಭವಾಗಿದೆ. ಆ ನೇಮಕವಾದ ತಕ್ಷಣ ಅಲ್ಲಿಗೆ ಸಿಬ್ಬಂದಿಯನ್ನು ಹಾಕುವಂಥ ಕೆಲಸ ಕಾರ್ಯವನ್ನು ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಅಶೋಕ ಎಂ.ಪಟ್ಟಣ ಇಲ್ಲ, ಮಾನ್ಯ ಹೆಚ್.ಡಿ. ರೇವಣ್ಣರವರು ಇಲ್ಲ, ಮಾನ್ಯ ನೆ.ಲ. ನರೇಂದ್ರಬಾಬುರವರು ಇಲ್ಲ, ಮಾನ್ಯ ಕೆ. ಅಭಯಚಂದ್ರ, ಶ್ರೀ ಯು.ಟಿ. ಖಾದರ್, ಶ್ರೀ ಸಿದ್ದರಾಮಯ್ಯ, ಶ್ರೀ ಕೆ.ಎಂ. ಶಿವಲಿಂಗೇಗೌಡರವರು ಇಲ್ಲ. ಮಾನ್ಯ ಗೂಳಿಹಟ್ಟಿ ಡಿ.ಶೇಖರ್ ರವರು ಮಾನ್ಯ ಸಚಿವರ ಗಮನವನ್ನು ಸೆಳೆಯಿರಿ.

2. ವಿಷಯ : ಹೊಸದುರ್ಗ ತಾಲ್ಲೂಕಿನ ರಸ್ತೆ ಮತ್ತು ಸೇತುವೆ ಅಭಿವೃದ್ಧಿ ಯೋಜನೆ ಹಾಗೂ ಗ್ರಾಮೀಣ ಸಂಕರ್ಪ ಯೋಜನೆಯಡಿ ಮುಂದುವರೆದ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡದಿರುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ) :– ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ 2010–11ನೇ ಸಾಲಿನಲ್ಲಿ ಗ್ರಾಮೀಣ ರಸ್ತೆಗಳಿಗೆ ಲೆಕ್ಕ ಶೀರ್ಷಿಕೆ 5054 ರಲ್ಲಿ ಸಣ್ಣ ಸಣ್ಣ ಕಂಟ್ರಾಕ್ಟ್‌ದಾರರು ಪ್ಯಾಕೇಜ್ ಟೆಂಡರ್ ಮೂಲಕ ಕೆಲಸವನ್ನು ಮಾಡಿ ಸುಮಾರು ಎರಡರಿಂದ ಎರಡೂವರೆ ವರ್ಷವಾದರೂ ಕೂಡ 1.22 ಕೋಟಿ ರೂ.ಗಳ ಬಿಲ್ ಬರಬೇಕಾಗಿದೆ. ಬಹಳಷ್ಟು ಸಾಲವನ್ನು ಮಾಡಿ ತೊಂದರೆಯಲ್ಲಿರುತ್ತಾರೆ. ದಯಮಾಡಿ ಬಾಕಿ ಬರಬೇಕಾದ ಈ ಬಿಲ್‌ನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) (ಉಪಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ,

ಚಿತ್ರದುರ್ಗ ಜಿಲ್ಲೆಯಲ್ಲಿ 2010–11ನೇ ಸಾಲಿನಲ್ಲಿ ಗ್ರಾಮೀಣ ಸಂಪರ್ಕ ಯೋಜನೆಯಡಿ ಹಂಚಿಕೆ ಮಾಡಿದ ಅನುದಾನ ರೂ.404.85 ಲಕ್ಷಗಳಿಗೆ ಎದುರಾಗಿ ಕೆಳಕಂಡಂತೆ ಜಿ.ಪಂ. ನಿಂದ ಕ್ರಿಯಾ ಯೋಜನೆ ತಯಾರಿಸಿ ಅನುಮೋದಿಸಿಕೊಂಡು ರಸ್ತೆ ಮತ್ತು ಸೇತುವೆ ಅಭಿವೃದ್ಧಿಯ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿರುತ್ತದೆ. ವಿವರ ಕೆಳಕಂಡಂತಿದೆ.

ಕ್ರ ಸಂ	ಲೆಕ್ಕ ಶೀರ್ಷಿಕೆ	ಸರ್ಕಾರದಿಂದ ಹಂಚಿಕೆ ಮಾಡಿದ ಅನುದಾನ	ಅನುಮೋದಿತ ಕ್ರಿಯಾ ಯೋಜನೆಯ ಮೊತ್ತ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಸರ್ಕಾರದಿಂದ ಬಾಕಿ ಬಿಡುಗಡೆಯಾಗಬೇಕಾದ ಅನುದಾನ
1	5054–04–800–3–03–133	331.03	589.75	331.03	258.72
2	5054–04–337–7–01–134	51.82	69.48	51.82	17.66
3	5054–04–337–7–01–132	22.00	22.00	11.78	10.22
	ಒಟ್ಟು	**404.85**	**681.23**	**394.63**	**286.60**

ಸರ್ಕಾರ ಹಂಚಿಕೆ ಮಾಡಿದ ಮೊತ್ತದಲ್ಲಿ ರೂ.394.63 ಲಕ್ಷ ಬಿಡುಗಡೆಯಾಗಿದ್ದು, ಹಂಚಿಕೆ ಮಾಡಿದ ಮೊತ್ತಕ್ಕಿಂತ ಹೆಚ್ಚುವರಿಯಾಗಿ ರೂ.276.38 ಲಕ್ಷ ಮೊತ್ತಕ್ಕೆ ಜಿ.ಪಂ.ನಲ್ಲಿ ಕ್ರಿಯಾ ಯೋಜನೆ ಅನುಮೋದಿಸಲಾಗಿರುತ್ತದೆ.

ಆದ್ದರಿಂದ, 2010–11ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಯಿಂದ ತಯಾರಿಸಲಾದ ಕ್ರಿಯಾ ಯೋಜನೆಯಂತೆ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಕ್ರಿಯಾ ಯೋಜನೆ ಮೊತ್ತವು ರೂ.174.56 ಲಕ್ಷಗಳಿದ್ದು, ಇದರಲ್ಲಿ ರೂ.52.47 ಲಕ್ಷ ವೆಚ್ಚ ಭರಿಸಲಾಗಿದು, ಉಳಿಕೆ ಮೊತ್ತ ರೂ.122.09 ಲಕ್ಷಗಳಿರುತ್ತದೆ.

ಜಿಲ್ಲಾ ಪಂಚಾಯತಿಗಳಿಗೆ ನಿರ್ದಿಷ್ಟ ಕಾರ್ಯಕ್ರಮದಡಿ ಹಂಚಿಕೆ ಮಾಡಿದ ಅನುದಾನದಂತೆ ಕಾರ್ಯಕ್ರಮ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಅದರಂತೆ, ಹಂಚಿಕೆ ಮಾಡಿದ ಅನುದಾನವು ಬಿಡುಗಡೆ ಮಾಡಲಾಗುತ್ತದೆ.

ಪ್ರಸ್ತುತ ಹೊಸದುರ್ಗ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕೈಗೊಂಡ ಕಾಮಗಾರಿಗಳ ಬಾಕಿ ಬಿಲ್ಲು ಪಾವತಿಗೆ ಹೊಸದುರ್ಗ ಮತಕ್ಷೇತ್ರದ ಶಾಸಕರು ಕೋರಿದ ಹಿನ್ನೆಲೆಯಲ್ಲಿ ಸದರಿ ತಾಲ್ಲೂಕಿನ ಕಾಮಗಾರಿಗಳ ದೊಡ್ಡ ಮೊತ್ತವು ಬಾಕಿ ಉಳಿಯಲು ಕಾರಣಗಳೊಂದಿಗೆ ವಿವರವಾದ ವರದಿಯನ್ನು ಪಡೆದು ಪರಿಶೀಲಿಸಲಾಗುವುದು.

ಶ್ರೀ ಗೂಳಿಹಟ್ಟಿ ಡಿ.ಶೇಖರ್ : ಮಾನ್ಯ ಅಧ್ಯಕ್ಷರೆ, ನಿಗದಿಪಡಿಸಿದ್ದಕ್ಕಿಂತ ಹೆಚ್ಚಿಗೆ ಹಣವನ್ನು ತೆಗೆದುಕೊಂಡಿದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ. ಹಿಂದಿನ ಆರ್.ಡಿ.ಪಿ.ಆರ್. ಮಂತ್ರಿಗಳಾದ ಕು.ಶೋಭಾ ಕರಂದ್ಲಾಜೆಯವರು ಇದ್ದಾಗ ಎಲ್ಲಾ ಕ್ಷೇತ್ರಗಳಿಗೆ 1 ರಿಂದ 2 ಕೋಟಿ ರೂ.ಗಳ ಅನುದಾನವನ್ನು ಕೊಟ್ಟಿರುತ್ತಾರೆ. ಆ ಅನುದಾನದಲ್ಲಿ ಇದು ಬರಬೇಕಾಗಿದೆ.

ಇದನ್ನು ಮತ್ತೆ verify ಮಾಡುವುದು. ನೋಡುತ್ತೇವೆ, ಮಾಡುತ್ತೇವೆ ಎನ್ನುವ ಬದಲು ಇದನ್ನು ಸರ್ಕಾರದಿಂದ ಬಿಡುಗಡೆ ಮಾಡಿ ಕೊಟ್ಟರೆ ತುಂಬಾ ಅನುಕೂಲವಾಗುತ್ತದೆ ಎಂದು ತಮ್ಮ ಮೂಲಕ ಮತ್ತೊಮ್ಮೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕೋರಿಕೆಯನ್ನು ಪಂಚಾಯತ್‌ರಾಜ್ ಸಚಿವರ ಗಮನಕ್ಕೆ ತಂದು, ಕಾಮಗಾರಿ ಆಗಿದ್ದರೆ, ಅದಕ್ಕೆ ದೊಡ್ಡ ಮೊತ್ತದ ಬಾಕಿ ಉಳಿದಿರುವುದನ್ನು ಸರಿಪಡಿಸುವಂತಹ ಕೆಲಸ ಮಾಡಿಸುತ್ತೇನೆ ಎಂದು ಭರವಸೆ ಕೊಡುತ್ತೇನೆ.